

ಕಲೆ: ವಾಗೀಶ ಹೆಗಡೆ

# ನಿನ್ನ ಪರಿಧಿ

ನಿನ್ನ ಕಣ್ಣ ಕೊಳದಲ್ಲಿ ಜಿಗಿದು ಈಜುತ್ತಿದೆ ನನ್ನ ಆತ್ಮ
ತೇಲಿಸುವುದು ಮುಳುಗಿಸುವುದು ನಿನ್ನ ಇಚ್ಛೆ

ನಿನ್ನ ಫಲವತ್ತಾದ ನೆಲಕೆ ತೂರಿ ಬಿದ್ದ ಬೀಜ ನಾನು
ಕೊಳೆಸುವುದು ಮೊಳೆಸುವುದು ನಿನ್ನ ಕಾರುಣ್ಯ

ನಿನ್ನ ಮೈ ಕುಲುಮೆಯಲಿ ಕಾದು ಕೈದಾಗಿದೆ ನನ್ನ ಮೈ
ತಟ್ಟಿ ಕತ್ತಿಯೊ ನೇಗಿಲ ಕುಳವಾಗಿಸುವುದು ನಿನ್ನ ವಿವೇಕ

ನಿನ್ನ ಬಯಲ ನಡು ನಡುವೆ ಹುದುಗಿರುವ ಬಂಡೆ ನಾನು
ಮೆಟ್ಟಿಲಾಗಿಸುವುದು ಶಿಲ್ಪವಾಗಿಸುವುದು ನಿನ್ನ ಕುಶಲತೆ

ನಿನ್ನ ಎದೆಬೆಟ್ಟದಲಿ ನೆರಳ ಗುಡಿಸುತ್ತಿರುವ ಬಿದಿರು ನಾನು
ಚಟ್ಟವಾಗಿಸುವುದು ಕೊಳಲಾಗಿಸುವುದು ನಿನ್ನ ಕಲೆ

ನಿನ್ನ ಗುರುತ್ವ ಪರಿಧಿ ಮೀರಲಾಗದ ನಿರುಪಾಯ ನಾನು
ಪ್ರಣಯ ಪ್ರಳಯವಾಗಿಸುವುದು ನಿನ್ನ ಪಾರುಪತ್ಯ

ನಿನ್ನ ಬಳಸಿ ತಬ್ಬಿ ಚುಂಬಿಸುವಾಗ ಚಿಮ್ಮಿದ ಕಿಡಿ ನಾನು
ಹಣತೆಯಾಗಿಸುವುದು ಕಿಚ್ಚಾಗಿಸುವುದು ನಿನ್ನ ಅರಿವು

● **ಹಂದಲಗೆರೆ ಗಿರೀಶ್**